# ಆಧುನಿಕ ಕರ್ನಾಟಕದ ಭಾಗ್ಯವಿಧಾತರು!

ಬೆಳಗಾವಿ ವಿಶ್ವ ಕನ್ನಡ ಸಮ್ಮೇಳನದಿಂದ ಒಂದು ವಿಷಯ ನಿಚ್ಚಳವಾಯಿತು. ಅದೆಂದರೆ– ಇಂದಿನ ಕನ್ನಡ ಸಾಂಸ್ಕೃತಿಕ ಜಗತ್ತು ನಿಂತಿರುವುದು ಹೈಟೆಕ್ ಹುಡುಗ ಹುಡುಗಿಯರಿಂದ. ನಿಜವಾದ ವಿಶ್ವಕನ್ನಡಿಗರೆಂದರೆ ಇವರೇನೆ! ಈ ಸಾಹಿತಿಗಳಿದ್ದಾರಲ್ಲ, ಅವರು ಕೂಪಮಂಡೂಕಗಳು. ಕನ್ನಡವನ್ನು ಗುತ್ತಿಗೆಗೆ ಪಡೆದಂತೆ ಮಾತನಾಡುವ ಹುಂಬರು...

ಈ ಹೊಸ ಶೋಧ ಬೆಳಕಿಗೆ ಬಂದದ್ದು ಒಬ್ಬ ಯುವ ಹೈಟೆಕ್ ಕಥೆಗಾರನಿಂದ. ವಿಶ್ವ ಕನ್ನಡ ಸಮ್ಮೇಳನದ ಉದ್ಘಾಟನೆ ಸಂಬಂಧ ಇನ್ಫೋಸಿಸ್ ನಾರಾಯಣಮೂರ್ತಿ ಕುರಿತಂತೆ ಬರಗೂರು ರಾಮಚಂದ್ರಪ್ಪನವರು ಎತ್ತಿದ ತಕರಾರು ವ್ಯಾಪಕ ಚರ್ಚೆಗೆ ಒಳಗಾಗಿದ್ದು ಗೊತ್ತೇ ಇದೆ. ಈ ಕುರಿತ ಚರ್ಚೆಯೊಂದರಲ್ಲಿ ಬರಗೂರು, ಐ.ಎಂ.ವಿಠಲಮೂರ್ತಿ ಹಾಗೂ ಓರ್ವ ಯುವ ಕಥೆಗಾರ ಮಾತಿಗೆ ಕೂತಿದ್ದರು. ಸಮ್ಮೇಳನ ಉದ್ಘಾಟಿಸುವ ವ್ಯಕ್ತಿ ಹೊಂದಿರಬೇಕಾದ ಸಾಂಸ್ಕೃತಿಕ ಮಹತ್ವದ ಬಗ್ಗೆ ಬರಗೂರು ಮಾತನಾಡುತ್ತಿದ್ದರೆ, ಈ ಯುವಕ 'ಸಂಸ್ಕೃತಿ'ಯ ಮೂಲಬೇರುಗಳ ಜುಟ್ಟನ್ನೇ ಹಿಡಿದಿದ್ದ. ಆತನ ಶೋಧ– ಉಗ್ರ ವಾದ ಏನೆಂದರೆ:

ಕನ್ನಡಕ್ಕೆ ಹೈಟೆಕ್ ಹುಡುಗರ ಕೊಡುಗೆ ದೊಡ್ಡದು. ಕನ್ನಡ ಕಥನ ಲೋಕವೇ ನಿಬ್ಬೆರಗಾಗಿ ನೋಡುವಂತಹ ಕಥೆಗಳನ್ನವರು ಬರೆದಿದ್ದಾರೆ. ಕನ್ನಡ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ತಮ್ಮ ಪ್ರಖರ ಪ್ರತಿಭೆಯ ಮೂಲಕ ಅಮೆರಿಕದ ಅಧ್ಯಕ್ಷ ಕೂಡ ಕಿಸುರುಗಣ್ಣಿನಿಂದ ಬೆಂಗಳೂರಿನತ್ತ ನೋಡುವಂತೆ ಮಾಡಿದ್ದಾರೆ. ಈ ಜೀನ್ಸ್ ಜಾಣಜಾಣೆಯರಿಂದಲೇ ಜಾಗತಿಕ ನಕ್ಷೆಯಲ್ಲಿ ಬೆಂಗಳೂರಿಗೊಂದು ಗೌರವ! ಇಲ್ಲದೆ ಹೋಗಿದ್ದರೆ...

ಹೀಗೆ ತನ್ನ ಬತ್ತಳಿಕೆಯಿಂದ ಆ ಯುವ ಹೈಟೆಕ್ ಕಥೆಗಾರ ಒಂದೊಂದೇ 'ಹತಾರ'ಗಳನ್ನು ಬೀಸುತ್ತ 'ವಿಕ್ರಮ' ಪ್ರದರ್ಶಿಸುತ್ತಿದ್ದರೆ ಬರಗೂರು ಪೆಚ್ಚಾಗಿ ಕುಳಿತರು. ಪಾಪ, ಕುಗ್ರಾಮದಿಂದ ಬೆಂಗಳೂರಿಗೆ ಬಂದ ಬರಗೂರರಿಗೆ 'ಜಾಗತಿಕ ಭಾಷೆ' ಹೇಗೆ ತಾನೆ ಅರ್ಥವಾಗಬೇಕು. ಆ ಯುವ ಹೈಟೆಕ್ ಕಥೆಗಾರ ಹೇಳುವುದರಲ್ಲಿ ತಥ್ಯವಿಲ್ಲವೆ? ಈ ಹುಡುಗ ಹುಡುಗಿಯರು ಬರುವುದಕ್ಕೆ ಮೊದಲು ಬೆಂಗಳೂರನ್ನು ನಿವೃತ್ತರಾದ ಮುದುಕರ ಹೊರತು ಉಳಿದ ಯಾರು ತಾನೆ ಮೂಸಿನೋಡುತ್ತಿದ್ದರು? ಈಗ ಹೇಗೆ ಬದಲಾಗಿದೆ ನೋಡಿ ರಂಗು! ನಿವೃತ್ತರ ಸ್ವರ್ಗ, ಉದ್ಯಾನನಗರಿ ಎನ್ನುವ ಕ್ಲೀಷೆಗಳನ್ನೆಲ್ಲ ಕೊಡವಿಕೊಂಡು ಬೆಂಗಳೂರು ಸಿಲಿಕಾನ್ ವ್ಯಾಲಿಯಾಗಿ ಪರಿವರ್ತನೆ ಹೊಂದಿದೆ! ಈ ಸಾಧನೆ ಹೈಟೆಕ್ ಮಂದಿಗೆ ತಾನೆ ಸಲ್ಲಬೇಕು? ಈ ಸತ್ಯವನ್ನರಿಯದ ಬರಗೂರರಂಥ ಸಾಹಿತಿಗಳು ಬೆರಳು ತೋರಿಸಿ ಅವಲಕ್ಷಣ ಅನ್ನಿಸಿಕೊಂಡರೆ ಯಾರೇನು ಮಾಡಲು ಸಾಧ್ಯ.

**–ಮಹತಿ**

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd.,Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68